ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ-

ನಾನು 10ನೇ ತರಗತಿವೆಗೆ ಕಲಿತಿದ್ದೇನೆ. ನಾನು ಬಿಸೆನೆಸ್ ಮಾಡುತ್ತೇನೆ. ನಾನು ಗಿರಿವಿ ಅಂಗಡಿ ಇಟ್ಟುಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಗಿರಿವಿ ಅಂಗಡಿ ಆರ್ ಟಿ ರಸ್ತೆಯಲ್ಲಿ ಇತ್ತು ಎಂದರೆ ಸರಿಯಲ್ಲ. 2003ರಲ್ಲಿ ಮಾತೃ ಭೂಮಿ ಎಂಟರ್ ಪ್ರೈಸೆಸ್ ಪ್ರಾರಂಭವಾಯಿತು. ವಾದಿ ಕಂಪನಿಯು ಕನ್ಸ್ಟ್ರಕ್ಷನ್, ರಿಯಲ್ ಎಸ್ಟೇಟ್ ಮತ್ತು ಫುಡ್ ಪ್ರೋಸಸ್ ನಡೆಸುತ್ತದೆ. ಈಗಲೂ ನಮ್ಮ ಕಂಪನಿ ಚಾಲ್ತಿಯಲ್ಲಿ ಇದೆ. ಈಗ ಅಶೋಕ್ ಕುಮಾರ್ ಗಾಂಧಿ ಮತ್ತು ಜಿತ್ರೇಂದ್ರ ಗಾಂಧಿ ವಾದಿ ಕಂಪನಿಯ ಪ್ರಸ್ತುತ ನಿರ್ದೇಶಕರಾಗಿರುತ್ತಾರೆ. ಸದರಿ ಕಂಪನಿಯು ನೋಂದಣಿಯಾಗಿದೆ. ವಾದಿ ಕಂಪನಿ ನೋಂಂದಣಿಯಾಗಿರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ, ಹಾಜರುಪಡಿಸುತ್ತೇನೆ ಎಂದು ಸಾಕ್ಷಿ ನುಡಿಯತ್ತಾರೆ.

ವಾದಿ ಕಂಪನಿಯ ಹೆಸರಿನಲ್ಲಿ ಜಮೀನು ಖರೀದಿಸಲು ಸರ್ಕಾರದಿಂದ ಅನುಮತಿ ಪಡೆದಿರುತ್ತೇನೆ. ಆ ಅನುಮತಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ನನಗೆ ನೆನಪಿಲ್ಲ. ನಾನು ಸರ್ಕಾರದಿಂದ ವಾದಿ ಹೆಸರಿನಲ್ಲಿ ಯಾವುದೇ ಅನುಮತಿ ಪಡೆದಿರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಹೆಸರಿನಲ್ಲಿ ಯಾವುದೇ ರಿಯಲ್ ಎಸ್ಟೇಟ್ ಬಿಸೆನೆಸ್ ಮಾಡುತ್ತಿಲ್ಲ ಮನೆ ಲೆಂಡಿಂಗ್ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸರ್ವೇ ನಂಬರ್ 26ರಲ್ಲಿ ಒಟ್ಟು ವಿಸ್ತೀರ್ಣ 4 ಎಕರೆ 26 ಗುಂಟೆ ಇದೆ ಎಂದರೆ ನನಗೆ ಜ್ಞಾಪಕ ಇಲ್ಲ. 3ನೇ ಪ್ರತಿವಾದಿ ಸಲ್ಲಿಸಿರುವ ಲಿಖಿತ

ಹೇಳಿಕೆಯನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. 3ನೇ ಪ್ರತಿವಾದಿ ಹಾಜರುಪಡಿಸಿರುವ ದಾಖಲೆಗಳನ್ನು ನಾನು ಪರೀಶಿಲಿಸಿದ್ದೇನೆ. 3ನೇ ಪ್ರತಿವಾದಿ ಹಾಜರುಪಡಿಸಿರುವ ದಾಖಲೆಗಳ ಪ್ರಕಾರ ದಾವಾ ಸರ್ವೇ ನಂಬರ್ 26ರಲ್ಲಿ 4 ಎಕರೆ 26 ಗುಂಟೆ ಎಂದು ಇದೆ ಎಂದರೆ ಸಾಕ್ಷಿ ನನಗೆ ಈಗ ಜ್ಞಾಪಕ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಮೂಲತಃ ಹೊನ್ನಪ್ಪನವರಿಗೆ ಸೇರಿರುತ್ತದೆ ಎಂದರೆ ಸರಿ. ಹೊನ್ನಪ್ಪನವರಿಗೆ 1ನೇ ಪ್ರತಿವಾದಿ ಸೇರಿ 3 ಜನ ಗಂಡು ಮಕ್ಕಳು ಮತ್ತು 2 ಹೆಣ್ಣು ಮಕ್ಕಳು ಎಂದರೆ ಸರಿ. ಹೊನ್ನಪ್ಪ, ಅವರ ಹೆಂಡತಿ ಮತ್ತು ಮಕ್ಕಳ ನಡುವೆ ದಿನಾಂಕ 15.04.2010ರಲ್ಲಿ ದಾವಾ ಆಸ್ತಿಯಲ್ಲಿ ಭಾಗ ಆಗಿರುತ್ತದೆ ಎಂದರೆ ಸರಿ. ಸದರಿ ವಿಭಾಗದ ಪತ್ರದ ಪ್ರಕಾರ ದಾವಾ ಸರ್ವೇ ನಂಬರ್ 26ರಲ್ಲಿ 1 ಎಕರೆ 22 ಗುಂಟೆ 1ನೇ ಪ್ರತಿವಾದಿ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಮೌಖಿಕವಾಗಿ ಈ ಹಿಂದೆ ಮಾಡಿಕೊಂಡಿದ್ದರು ನಂತರದಲ್ಲಿ ಸಬ್ ರಿಜಿಸ್ಟರ್ ಕಛೇರಿಯಲ್ಲಿ ನೋಂದಣಿ ಮಾಡಿಸಿಕೊಂಡಿರುತ್ತಾರೆ. ಆ ವಿಭಾಗ ಪತ್ರವನ್ನು ನಾನು ನೋಡಿರುತ್ತೇನೆ. ವಿಭಾಗ ಪತ್ರದ ನೋಂದಣಿಯಾದ ದಿನದಂದೆ 1ನೇ ಪ್ರತಿವಾದಿಯ ಭಾಗಕ್ಕೆ ಬಂದ 1 ಎಕರೆ 22 ಗುಂಟೆಯ ಸ್ವಾಧೀನ ಕೊಡಲಾಯಿತು ಎಂದರೆ ಸಾಕ್ಷಿ ಮೌಖಿಕವಾಗಿ ಮೊದಲೇ ಕೊಡಲಾಗಿತ್ತು ನಂತರದಲ್ಲಿ ವಿಭಾಗ ಪತ್ರವನ್ನು ನೋಂದಣಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ದಿನಾಂಕ 15.04.2010ರ ವಿಭಾಗ ಪತ್ರದಲ್ಲಿ ಈ ಹಿಂದೆ ಮೌಖಿಕವಾಗಿ ಭಾಗ ಮಾಡಿಕೊಂಡಂತೆ ಎಂದು ಎಲ್ಲಿಯೂ ಬರೆದಿಲ್ಲ ಎಂದರೆ ಸರಿಯಲ್ಲ, ಬರೆದಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. 1ನೇ ಪ್ರತಿವಾದಿಗೆ ದಿನಾಂಕ 15.04.2010ರಂದು 1 ಎಕರೆ 22 ಗುಂಟೆಯ ಖುದ್ದು ಸ್ವಾಧೀನ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 15.04.2010ರ ತನಕ ದಾವಾ ಆಸ್ತಿಯು ಒಟ್ಟು

ಕುಟುಂಬದ ಸ್ವಾಧೀನದಲ್ಲಿ ಇತ್ತು ಎಂದರೆ ಸರಿಯಲ್ಲ. ಹೊನ್ನಪ್ಪನವರು ಅಲ್ಲಿಯವರೆಗೆ ದಾವಾ ಆಸ್ತಿಯನ್ನು ಒಟ್ಟು ಕುಟುಂಬದ ಸ್ವತ್ತಾಗಿ ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ.

1ನೇ ಪ್ರತಿವಾದಿ ರಾಮಮೂರ್ತಿ 2006ರಲ್ಲಿ ಪ್ರಥಮ ಬಾರಿಗೆ ನನಗೆ ಪರಿಚಯವಾಯಿತು. ಅವರು ನನ್ನ ಸ್ನೇಹಿತ ಲ್ಯಾಂಡ್ ಬ್ರೋಕರ್ ಅಣ್ಣಾನವರಿಂದ ಪರಿಚಯವಾಗಿರುತ್ತದೆ. ರಾಮಮೂರ್ತಿರವರ ಮನೆಯಲ್ಲಿ ನಾನು ಭೇಟಿಯಾಗಿರುತ್ತೇನೆ. ನಮ್ಮ ಬ್ರೋಕರ್ ರಾಮಮೂರ್ತಿರವರು ಜಮೀನು ಮಾರಾಟ ಮಾಡುತ್ತಾರೆ ಎಂದು ಹೇಳಿದ್ದರಿಂದ ನಾನು ಭೇಟಿ ಮಾಡಿರುತ್ತೇನೆ. ದಿನಾಂಕ ಮತ್ತು ತಿಂಗಳು ನನಗೆ ನೆನಪಿಲ್ಲ. 1ನೇ ಪ್ರತಿವಾದಿಯ ಮನೆಗೆ ನಾನು, ನನ್ನ ಸ್ನೇಹಿತ ಅಣ್ಣಯ್ಯ, 1ನೇ ಪ್ರತಿವಾದಿ ಸಂಬಂಧಿ ಡಿ ರಾಜಣ್ಣ ಮತ್ತು ಕೆಂಪಣ್ಣ ಇತರರು ಹೋಗಿದ್ದೆವು. ಒಟ್ಟು 4-6 ಜನ 1ನೇ ಪ್ರತಿವಾದಿ ಮನೆಗೆ ಹೋಗಿದ್ದೆವು. ಅವರು ಜಮೀನು ಮಾರಾಟ ಮಾಡುವ ಬಗ್ಗೆ ವಿವರಿಸಿದರು ನಾನು ಆ ದಿನ ಯೋಚನೆ ಮಾಡಿ ಹೇಳುತ್ತಿದ್ದೇನೆ ಎಂದು ಹೊರಟು ಹೋದೆ. ಆ ದಿನ ನಾನು ಪಹಣಿ ಮಾತ್ರ ನೋಡಿರುತ್ತೇನೆ ಬೇರೆ ದಾಖಲೆ ಪರಿಶೀಲಿನೆ ಮಾಡಿಲ್ಲ. ಅಣ್ಣಯ್ಯನವರು ಈಗಲೂ ನನ್ನ ಜೊತೆ ಚನ್ನಾಗಿರುತ್ತಾರೆ ಎಂದರೆ ಸಾಕ್ಷಿ ಅವರು ತೀರಿಕೊಂಂಡು ಬಹಳ ವರ್ಷವಾಗಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಜೊತೆ ಬಂದವರಲ್ಲಿ ಯಾರು ಯಾರು ಬದುಕಿದ್ದಾರೆ ಎಂದರೆ ಸಾಕ್ಷಿಯು ನನ್ನ ಜೊತೆ ಬಂದ ಅಣ್ಣಯ್ಯ ಮಾತ್ರ ಬಂದಿದ್ದರು ಎಂದು ನುಡಿಯುತ್ತಾರೆ.

2006ರ ನಂತರ ನೀವೆಲ್ಲಾ ಯಾವಾಗ ಭೇಟಿಯಾಗಿರುತ್ತೀರಾ ಎಂದರೆ ಸಾಕ್ಷಿಯು ಹಲವಾರು ಬಾರಿ ಭೇಟಿಯಾಗಿರುತ್ತೇವೆ. ರಾಮಮೂರ್ತಿರವರ

ಮನೆಯಲ್ಲಿ ಭೇಟಿಯಾಗಿರುತ್ತೇವೆ ಎಂದು ಸಾಕ್ಷಿ ನುಡಿಯುತ್ತಾರೆ. 15.01.2007ರಲ್ಲಿ ಅಂತಿಮವಾಗಿ ಕೊಡುವುದು ಮತ್ತು ತೆಗೆದುಕೊಳ್ಳುವ ಮಾತುಕತೆಯಾಗಿರುತ್ತದೆ. ಆ ದಿನ ನೀವು ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವ ಯಾವ ದಾಖಲೆಗಳನ್ನು ಪರಿಶೀಲಿಸಿರುತ್ತೀರಾ ಎಂದರೆ ಸಾಕ್ಷಿ ಪಹಣಿ, ಎಂ.ಆರ್. ಆ ದಿನಾಂಕಕ್ಕೆ 1ನೇ ಪ್ರತಿವಾದಿ ಹೆಸರಿನಲ್ಲಿ ಯಾವುದೇ ಟೈಟಲ್ ಡೀಡ್ ಇರಲಿಲ್ಲ ಎಂದರೆ ಸರಿ, ಎಂ.ಆರ್ ಕಾಪಿಯಲ್ಲಿ ನೋಂದಣಿಯಾಗಿತ್ತು ಎಂದು ನುಡಿಯುತ್ತಾರೆ.

ನಾನು ಹಲವಾರು ಅಗ್ರಿಮೆಂಟ್ ಮಾಡಿಕೊಂಡಿರುವ ಕಾರಣ ನನಗೆ ವ್ಯವಹಾರ ಜ್ಞಾನ ಚೆನ್ನಾಗಿ ಇದೆ ಎಂದರೆ ಸರಿ. ರೆವಿನ್ಯೂ ದಾಖಲೆಗಳು ಟೈಟಲ್ ಡೀಡ್ ಆಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ಅಗ್ರಿಮೆಂಟ್ ಮಾಡಿಕೊಳ್ಳುವ ಮೊದಲು ನಾನು ವಕೀಲರ ಬಳಿ ಕಾನೂನು ಅಭಿಪ್ರಾಯ ಪಡೆದುಕೊಂಡಿರುತ್ತೇನೆ. ವಕೀಲರ ಹೆಸರು ನನಗೆ ಜ್ಞಾಪಕ ಇಲ್ಲ. ಬರವಣಿಯಲ್ಲಿ ಕೊಟ್ಟ ಕಾನೂನು ಅಭಿಪ್ರಾಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ.

ದಿನಾಂಕ 19.01.2007ರಂದು ಆದ ಅಗ್ರಿಮೆಂಟ್ ದಿನ ಕೆಂಪಯ್ಯ, ರಾಮಮೂರ್ತಿ ಲಲಿತಮ್ಮ ಮತ್ತು ನಾನು ಹಾಜರಿದ್ದೆವು. ಆ ಅಗ್ರಿಮೆಂಟ್ ನನ್ನ ಬಳಿ ಇದೆ ಎಂದರೆ ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ-31ರ ಪ್ರಕಾರ ಈ ಕೇಸಿನ 3ನೇ ಪ್ರತಿವಾದಿಗೆ ಸುಮಾರು 11 ವರ್ಷ ವಯಸ್ಸು ಮಂದರೆ ಸರಿ. ಆದೇ ರೀತಿ 4ನೇ ಪ್ರತಿವಾದಿಗೆ 13 ವರ್ಷ ವಯಸ್ಸು ಎಂದರೆ ಸರಿ. ಆ ದಿನಕ್ಕೆ ದಾವಾ ಆಸ್ತಿಯ ಮೇಲೆ ಅವರಿಗೂ ಸಹ ಹಕ್ಕು ಇದೆ ಎಂದರೆ ಸರಿ. ದಾವಾ ಆಸ್ತಿಯು 1ನೇ ಪ್ರತಿವಾದಿ ಸ್ವಯಾರ್ಜಿತ

ಸ್ವತ್ತು ಅಲ್ಲ ಎಂದರೆ ಸರಿ. ಅವರಿಗೆ ವಿಭಾಗದ ಮೂಲಕ ಬಂದಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ದಾವಾ ಆಸ್ತಿಯು 3 ಮತ್ತು 4ನೇ ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ವಿಭಾಗ ಪತ್ರದ ಪ್ರಕಾರ 1ನೇ ಪ್ರತಿವಾದಿಗೆ ಅದು ಸ್ವಯಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ಈ ವಿಚಾರವನ್ನು ವಕೀಲರು ನೀಡಿರುವ ಕಾನೂನು ಅಭಿಪ್ರಾಯದಲ್ಲಿ ಬರೆದಿರುವ ಬಗ್ಗೆ ಪರಿಶೀಲಿಸಬೇಕು.

ಸಾಮಾನ್ಯವಾಗಿ ಅಪ್ರಾಪ್ತ ವಯಸ್ಕರ ಸ್ವತ್ತುಗಳನ್ನು ಖರೀದಿಸುವ ಮುನ್ನ ನ್ಯಾಯಾಲಯದಿಂದ ಅನುಮತಿ ಪಡೆಯಬೇಕು ಎಂದರೆ ಸರಿ. ನಿಪಿ-31ಕ್ಕೆ 3 ಮತ್ತು 4ನೇ ಪ್ರತಿವಾದಿಗಳು ಸಹಿ ಮಾಡಿಲ್ಲ ಎಂದರೆ ಸರಿ, ಅವರ ಪರವಾಗಿ ಅವರ ತಂದೆ ಸಹಿ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಅಂದಿನ ದಿನಕ್ಕೆ ನಾನು ಕ್ರಯದ ಮೊಬಲಗನ್ನು ರೂ 96 ಲಕ್ಷ ಚಿಲ್ಲರೆ ಮೊತ್ತಕ್ಕೆ ನಿಗಧಿಪಡಿಸಿದೆ. ರಾಮಮೂರ್ತಿ ಮತ್ತು ಲಲಿತಮ್ಮ ವಿದ್ಯಾವಂತರು ಅಲ್ಲ ಎಂದರೆ ಸರಿಯಲ್ಲ. ಅವರು ಇಂದಿಗೂ ಸಹ ಕನ್ನಡದಲ್ಲೇ ಸಹಿ ಮಾಡುತ್ತಾರೆ ಎಂದರೆ ಸರಿ.

ನಿಪಿ-31ರ ಕರಾರು ಪತ್ರವನ್ನು ಎಲ್ಲಿ ತಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿಯು ರಾಮಮೂರ್ತಿ ತಯಾರು ಮಾಡಿ ತಂದಿರುತ್ತಾರೆ. ಸ್ಟಾಂಪ್ ಪೇಪರ್ ಗೆ ಹಣವನ್ನು ನಾನು ಹಣ ಕೊಟ್ಟಿರುತ್ತೇನೆ. ಸ್ಟಾಂಪ್ ಪೇಪರ್ ಅನ್ನು ಎಸ್.ಬಿ.ಐ ಮಲ್ಲೇಶರಂನಲ್ಲಿ ಖರೀದಿಸಲಾಗಿದೆ. ಎಸ್.ಬಿ.ಐ ಮಲ್ಲೇಶರಂ ನಿಂದ ನಮ್ಮ ಕಛೇರಿಗೆ 4 ಕಿ.ಮೀ ದೂರ ಆಗುತ್ತದೆ. ಖರೀದಿ ಮಾಡುವವರ ಹೆಸರಿನ್ನೇ ಸ್ಟಾಂಪ್ ಪೇಪರ್ ನಮೂದು ಮಾಡಲಾುತ್ತದೆ ಎಂದರೆ ಸರಿ. ಸ್ಟಾಂಪ್ ಪೇಪರ್ ನಲ್ಲಿ ವಾದಿ ಕಂಪನಿಯ ಹೆಸರು

ಬರೆಯಲಾಗಿದೆ ಎಂದರೆ ಸರಿ. ರಾಮಮೂರ್ತಿ ರವರು ನಮ್ಮ ಕಛೇರಿಯಿಂದ ತೆಗೆದುಕೊಂಡು ಹೋಗಿ ಟೈಪ್ ಮಾಡಿಸಿ ತಂದಿರುತ್ತಾರೆ. ನಾನು ಅದರಲ್ಲಿ ಏನು ಬರೆಯಲಾಗಿದೆ ಎಂದು ಪರಿಶೀಲಿಸಿರುತ್ತೇನೆ.

ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.